## ಬುದ್ಧಿವಂತರ ದಡ್ಡತನ

'ಕಲರ್ಸ್ ಕನ್ನಡ'ದ ಧಾರಾವಾಹಿಗಳನ್ನು ಆಸಕ್ತಿಯಿಂದ ನೋಡುತ್ತಿದ್ದ ನಾನು, ಈಚೆಗೆ ಕೆಲವು ತಿಂಗಳುಗಳಿಂದ ನೋಡುವುದನ್ನು ಕಡಿಮೆ ಮಾಡಿದ್ದೇನೆ. ಈಗ ನೋಡುತ್ತಿರುವ ಕೆಲವೇ ಕೆಲವನ್ನೂ ಇನ್ನು ಸ್ವಲ್ಪ ಕಾಲದಲ್ಲೇ ನೋಡುವುದನ್ನು ನಿಲ್ಲಿಸುತ್ತೇನೆ ಎಂದುಕೊಂಡಿದ್ದೇನೆ. ತಳಬುಡವಿಲ್ಲದೆ, ಅರ್ಥಾರ್ಥ ಸಂಬಂಧವಿಲ್ಲದೆ, ಗೊತ್ತುಗುರಿಯಿಲ್ಲದೆ ಬೆಳೆಯುತ್ತಿರುವ ಧಾರಾವಾಹಿಗಳ ಬೆಳವಣಿಗೆ ನನ್ನನ್ನು ಕಂಗೆಡಿಸಿದೆ. ಇವನ್ನು ನೋಡುವುದಕ್ಕಿಂತ ಯಾವುದಾದರೂ ಕತೆ ಲೇಖನಗಳನ್ನು ಓದಿದ್ದರೆ ಎಷ್ಟೋ ಚೆನ್ನಾಗಿತ್ತು ಎನಿಸಿದೆ.

'ಅಗ್ನಿ ಸಾಕ್ಷಿ'ಯ ಚಂದ್ರಿಕಾ ಅಭಿನಯವೇನೋ ಚೆನ್ನಾಗಿದೆ. ಆದರೆ ಖಳತ್ವ ನಮ್ಮನ್ನು ದಿಙ್ಮೂಢವಾಗಿಸಿದೆ. ಅವಳು ಮಾತಾಡುವುದನ್ನು ಒಮ್ಮೆ ಮೊಬೈಲ್ ಫೋನಲ್ಲಿ ಧ್ವನಿ ಮುದ್ರಿಸಿಕೊಂಡು ಎಂದೋ ಅವಳನ್ನು ತಪ್ಪಿತಸ್ಥಳನ್ನಾಗಿ ನಿಲ್ಲಿಸಬಹುದಿತ್ತು. ಆದರೆ ಯಾರೊಬ್ಬರಿಗೂ ಅಂಥ ಯೋಚನೆ ಇನ್ನೂ ಬಂದೇ ಇಲ್ಲ; ಬಹುಶಃ ಬರುವುದೂ ಇಲ್ಲ. ಬುದ್ಧಿವಂತರೇ ಎಲ್ಲಾ ಇದ್ದೂ ದಡ್ಡರಂತೆ ವರ್ತಿಸುತ್ತಿದ್ದಾರೆ.

—ಪಿ.ಯಶೋದಾ, ಚಿತ್ರದುರ್ಗ

## ಬರೆಯುವವರಿಗೆ ಬೇಸರ ಇಲ್ಲವೇ?

ಬಹುತೇಕ ಧಾರಾವಾಹಿ (ಕಿನ್ನರಿ, ಗಂಗಾ, ಗೋಕುಲದಲ್ಲಿ ಸೀತೆ, ಪುಟ್ಟ ಗೌರಿಯ ಮದುವೆ ಮುಂತಾದವು)ಗಳಲ್ಲಿ 'ನುರಿತ' ಬಂಟರನ್ನೇ (ಅಪಹರಣ, ಕೊಲೆಗಾಗಿ) ನೋಟುಗಳ ಕಟ್ಟುಗಳನ್ನೇ ಕೊಟ್ಟು ನೇಮಿಸಿದಾಗಲೂ ಅವರು ವಿಫಲರಾಗುತ್ತಿದ್ದಾರಲ್ಲ? ಆದರೂ ಅವರನ್ನೇ ನಂಬಿಕೊಂಡು ಮರಳಿಯತ್ನಿಸಲು ಹಣ ನೀಡುವುದು ಎಷ್ಟು ಸಮಂಜಸ? 'ಪುಟ್ಟ ಗೌರಿಯ ಮದುವೆ'ಯಲ್ಲಿ ನಿಶ್ಯಕ್ತ, ನಿರುಪಯೋಗಿ, ನಿರುಪದ್ರವಿ ತಂದೆಯನ್ನು ಕಾಯಲು 'ನಾಲ್ಕು ಬಂಟರ'ನ್ನು ನೇಮಿಸಲಾಗಿದೆ. ವರ್ಷಗಳೇ ಕಳೆದರೂ, ನುರಿತ ಬಂಟರು ಕಾಯುವುದನ್ನು ಬಿಟ್ಟು ಬೇರೆ ಕೆಲಸ ಮಾಡುವಂತಿಲ್ಲ. 1.ಅವರಿಗೂ ಬೇಜಾರು... ಪುಕ್ಕಟೆ ದಿನಗೂಲಿ! 2. 'ಕಿನ್ನರಿ' ಮೂಲ ತಂದೆ ಸತ್ತು ವರ್ಷಗಳೇ ಕಳೆದಿವೆ... ಮಕ್ಕಳು ಬೆಳೆದು ದೊಡ್ಡವರಾಗಿದ್ದಾರೆ. ಆದರೂ ಅಜ್ಜಿಯ 'ತಿರಸ್ಕಾರ' ಭಾವ ಹಾಗೇ ಉಳಿದಿದೆ. ಇನ್ನೂ ಎಷ್ಟು ಕಾಲ ಕಥೆ ಎಳೆದುಕೊಂಡು ಹೋಗುತ್ತಾರೊ? ಕಥೆಗಾರ ಹಾಗೂ ನಿರ್ದೇಶಕರಿಗೆ ಬೇಜಾರು ಅನಿಸುತ್ತಿಲ್ಲವೆ?

—ಗೋಪಾಲ ಆಶ್ರಿತ, ಬೆಂಗಳೂರು

ವಾರದ ಪತ್ರ

## ಜಾಹೀರಾತಿಗೂ ಬೇಕು ಸೆನ್ಸಾರ್

ಈ ದಿನಗಳಲ್ಲಿ ಬರುವ ಜಾಹೀರಾತುಗಳು ನೆನಪಿನಲ್ಲಿ ಉಳಿಯುವ, ಹಿತವೆನಿಸುವಂತಹದ್ದು ಕಡಿಮೆ. ನೋಡಲೂ ಕಿರಿಕಿರಿ ಉಂಟುಮಾಡುತ್ತಿವೆ. ಉದಾಹರಣೆಗೆ ನ್ಯಾಪ್‌ಕಿನ್ ಜಾಹೀರಾತು. ಇದರಲ್ಲಿ ಹುಡುಗಿಯರು ಶಾಲೆಯಲ್ಲಿ ತಮ್ಮ ಸ್ಕರ್ಟ್‌ನ್ನು 'ಚೆಕ್ ಚೆಕ್' ಎಂದು ತಿರುಗಿ ನೋಡಿಕೊಳ್ಳುತ್ತಾರೆ. ಇನ್ನೊಂದು ಚಾಕಲೇಟಿನ ಜಾಹೀರಾತು. ಒಬ್ಬ ಹದಿಹರೆಯದ ಹುಡುಗಿ ಓದುತ್ತಾ ಕುಳಿತಾಗ ಒಬ್ಬ ಹುಡುಗನ್ನ ನೋಡಿ ಬಾಯಲ್ಲಿ ನೀರು ಸುರಿಸುವುದು. ಅವಳನ್ನು ಗದರಿದ ಪಕ್ಕದ ಆಸಾಮಿ ಹೆಂಗಸನ್ನು ನೋಡಿ ಬಾಯಿ ಚಪ್ಪರಿಸುವುದು. ಇಂತಹ ಅಶ್ಲೀಲ ಜಾಹೀರಾತುಗಳನ್ನು ನಿಯಂತ್ರಿಸದಿದ್ದರೆ ಅವೇ ಮುಂದುವರೆಯಬಹುದು.

—ಸೌರಭ, ಬೆಂಗಳೂರು

## ಸಾಧಕರ ಕುರ್ಚಿಗೆ ಮೆರಗು

ಸಾಧಾರಣವಾಗಿ ವೀಕ್ ಎಂಡ್ ವಿಥ್ ರಮೇಶ್ ಕಾರ್ಯಕ್ರಮದಲ್ಲಿ ಹಲವು ಖ್ಯಾತನಾಮರನ್ನು ನೋಡಿ ವೀಕ್ಷಕರು ಸಂತೋಷಪಡುತ್ತಾರೆ. ಅವರಲ್ಲಿ ನಿಜವಾದ ಸಾಧಕರು ಭಿನ್ನರಾಗಿರುತ್ತಾರೆ. ದಿ.5.6.17 ರಂದು ಆ ಕುರ್ಚಿಗೆ ಮೆರಗು ತಂದವರು ವಿಜಯ ಸಂಕೇಶ್ವರ ಎಂದರೆ ತಪ್ಪಾಗಲಾರದು.

ಸಾಮಾನ್ಯವಾಗಿ ಮನುಷ್ಯ ಹೇಳುವುದು ಒಬ್ಬ ಯಶಸ್ವಿ ಗಂಡಸಿನ ಹಿಂದೆ ಒಬ್ಬ ಹೆಂಗಸು ಇರುತ್ತಾಳೆ ಎಂದು. ಆದರೆ ವಿಜಯ ಸಂಕೇಶ್ವರ ಅವರು ಹೇಳಿದ ಮಾತುಗಳು, 'ತಮ್ಮ ಯಶಸ್ಸಿನ ಹಿಂದೆ 20,000 ನೌಕರರಿದ್ದಾರೆ' ಎಂದಿದ್ದು ನಿಜಕ್ಕೂ ಅದ್ಭುತ. ತನ್ನ ಮನಸ್ಸಿನ ನೆಮ್ಮದಿಗೆ ಕೊನೆಯವರೆಗೂ ದುಡಿಯುವೆ ಎಂಬುದು ಅವರ ನಿಜವಾದ ಸಾಧನೆಯನ್ನು ಎತ್ತಿ ತೋರಿಸುತ್ತದೆ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು, ಬೀರಣ್ಣ ನಾಯಕ ಮೊಗಟಾ

## ಕುತೂಹಲಕಾರಿ ..ಪ್ರತಿಭಾ

ಝೀ ವಾಹಿನಿಯಲ್ಲಿ ಇತ್ತೀಚೆಗೆ ಪ್ರಸಾರವಾಗುತ್ತಿರುವ 'ಪತ್ತೇದಾರಿ ಪ್ರತಿಭಾ' ಧಾರಾವಾಹಿ ಕುತೂಹಲ ಕೆರಳಿಸುತ್ತಿದೆ. ಇತ್ತೀಚಿನ ಸಂಚಿಕೆಯಲ್ಲಿ ಕೊಲೆಗಾರ್ತಿಯು ಪೊಲೀಸರಿಗೆ ಸಿಕ್ಕುಬಿದ್ದಾಗ ತನ್ನನ್ನು ತಾನು ಸಮರ್ಥಿಸಿಕೊಂಡ ರೀತಿ ನಂಬಲು ಅಸಾಧ್ಯ ಎನ್ನಿಸುವಷ್ಟು ಅಮಾನವೀಯವಾಗಿತ್ತು.

—ವೃಂದಾ, ಬೆಂಗಳೂರು

## ಮರು ಪ್ರಸಾರ ನಿಲ್ಲಿಸಿ

ಚಂದನ ವಾಹಿನಿಯಲ್ಲಿ ಆಗಾಗ 'ಭಾರತ್ ಸ್ಟೋರ್ಸ್' ಸಿನಿಮಾ ಪ್ರಸಾರವಾಗುತ್ತಿದೆ. ಅದು ರಾಷ್ಟ್ರ ಪ್ರಶಸ್ತಿ ಪಡೆದುದೇನೋ ನಿಜ. ಹಾಗಂತ ಅದನ್ನು ಆಗಾಗ ಪ್ರಸಾರ ಮಾಡುತ್ತಿದ್ದರೆ ಪ್ರೇಕ್ಷಕರ ಪರಿಸ್ಥಿತಿ ಏನಾಗಬೇಕು. ಸಹನೆಗೂ ಒಂದು ಮಿತಿಯಿದೆಯಲ್ಲವೇ...?

—ಮೂಲೆಮನೆ ರತ್ನಾಕರ ಭಿಡೆ

## ಕ್ರೀಡೆಗೂ ಮಾನ್ಯತೆ ಬೇಕು

ಕೆ.ಎಸ್. ಸೋಮೇಶ್ವರ ಅವರು ಸಾಧನೆ ಮಾಡಿದ ಕೆಲ ವ್ಯಕ್ತಿಗಳನ್ನು ಗಮನದಲ್ಲಿ ಇಟ್ಟುಕೊಂಡು, ಗತಿಸಿಹೋದ ನೆನಪುಗಳನ್ನು ಮತ್ತೆ ಮತ್ತೆ ಮರುಕಳಿಸುವಂತೆ 'ಜಾಣರ ಪೆಟ್ಟಿಗೆ' (01.06.17)ಯಲ್ಲಿ ಮಾಡಿದ್ದಾರೆ. ಕ್ರೀಡೆಯ ಜೊತೆಗೆ ತಮ್ಮ ಭಾವಾನಾತ್ಮಕ ಸಂಬಂಧವನ್ನು ಬೆಳೆಸಿ, ಪೋಷಿಸಿ, ತಮ್ಮ ಜೀವವನ್ನೇ ಗಂಧದಂತೆ ತೇದ ಕ್ರೀಡಾಪಟುಗಳು ಇಂದಿನ ಯುವಕರಿಗೆ ಆದರ್ಶ. ಅಂತಹ ಸೂಕ್ಷ್ಮವನ್ನು ಸ್ಮರಿಸಿದ ಸೋಮೇಶ್ವರ್ ಅವರಿಗೆ ವಂದನೆಗಳು.

—ಸರಸ್ವತಿ. ಎ. ರಾವ್, ಬೆಂಗಳೂರು

## ಕಪಾಳಮೋಕ್ಷಕ್ಕೆಂದು ಮೋಕ್ಷ?

ಝೀ ವಾಹಿನಿಯಲ್ಲಿ ಪ್ರಸಾರಗೊಳ್ಳುತ್ತಿರುವ ಧಾರಾವಾಹಿ 'ಮಹಾನದಿ'ಯಲ್ಲೊಂದು ಅಸಹನೀಯ ದೃಶ್ಯವಿದೆ. ಈ ಕಥೆಯಲ್ಲಿ ಅಕ್ಕ ತಂಗಿಗೆ, ತಂಗಿ ಅಕ್ಕನಿಗೆ, ಗಂಡ ಹೆಂಡತಿಗೆ ಪದೇ ಪದೇ (ಸಾಂದರ್ಭಿಕವಾಗಿ) ಕೈ ಬೀಸಿ ಕೆನ್ನೆಗೇಟು ಬಿಗಿಯುವುದನ್ನು ತೋರಿಸಲಾಗುತ್ತಿದೆ. ಆಪ್ತ ಸಂಬಂಧಗಳಲ್ಲೂ ಈ ಹೊಡೆದಾಟದ ಸನ್ನಿವೇಶಗಳ್ಯಾಕೆ ಮಹತ್ವವನ್ನು ಪಡೆಯುತ್ತವೆಯೋ ಅರಿವಾಗುವುದಿಲ್ಲ....! ಹೀಗೆ ಯಾವುದೇ ಕಥೆ ಧಾರಾವಾಹಿಗಳಲ್ಲಿ ಕಾಣಿಸಿಕೊಳ್ಳುವ ಈ ಕಾರ್ಯಕ್ರಮದ ವೈಭವೀಕರಣ ನೋಡುಗರಿಗೆ ನೀಡುವ ಸಂದೇಶವಾದರೂ ಏನು? ವಿದ್ಯಾವಂತ ನಾಗರಿಕರೊಳಗೆ ಹೆಣೆಯಲ್ಪಡುವ ಸಂಬಂಧಗಳಿಗೂ ಈ ಘಟನೆಗಳಿರಲೇ ಬೇಕಾ.. ಇದರಿಂದ ಮುಕ್ತಿ ಅಸಾಧ್ಯವಾ..?

— ಸರಸ ಬಿ. ಕೃಷ್ಣ, ಕಮ್ಮರಡಿ

## ನೆರವೇರಲಿ ಆಸೆ

ವೀಕ್ ಎಂಡ್‌ನಲ್ಲಿ ರಮೇಶ್ ಬಿ.ಜಯಶ್ರೀ ಅವರನ್ನು ಪರಿಚಯಿಸಿದ್ದು ಅದ್ಭುತವಾಗಿತ್ತು. ಶ್ರೀಮತಿ ಜಯಶ್ರೀ ಗುಬ್ಬಿ ವೀರಣ್ಣನವರ ಮಗಳು ಎನ್ನುವುದನ್ನು ಬಿಟ್ಟರೆ ತಮ್ಮ ಕಷ್ಟ ಸುಖದ ಸಂಸಾರದ ನಿರ್ವಹಣೆಯನ್ನು ಹೊತ್ತು, ನೃತ್ಯ, ಸಂಗೀತ, ಅಭಿನಯವನ್ನು ಏಕಕಾಲದಲ್ಲಿ ಪೋಷಿಸಿದ್ದು ಕಲೆಯ ಅತ್ಯದ್ಭುತ ಸಾಧನೆಯೇ ಸರಿ. ರಾಜಕೀಯವನ್ನೂ ಒಳಗೊಂಡು ಗೃಹಿಣಿಯರಿಗೆ ಮಾದರಿಯ ವ್ಯಕ್ತಿಯಾಗಿ, ಇನ್ನೂ ಹೆಚ್ಚಿನ ಯೋಜನೆಯನ್ನು ರೂಪಿಸುವ ಉದ್ದೇಶ ಇರುವ ಬಿ.ಜಯಶ್ರೀ ಆಸೆ ನೆರವೇರಲಿ ಎಂದು ಆಶಿಸುವ.

—ಸೀತಾಕೇಶವ, ಸಿಡ್ನಿ